ಸಾಕ್ಷಿಯನ್ನು ದಿ: 16.07.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-

1. ದಾವೆ ಹಾಕಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಾಯಿ ದಾನಪತ್ರ ಹಾಕಿದ್ದು ಆ ಬಗ್ಗೆ ದಾವೆ ಸಲ್ಲಿಸಿರುತ್ತೇನೆ. ಈ ದಾವೆಹಾಕಿರುವ ಆಸ್ತಿಲ್ಲಿ ನನಗೆ ಹಕ್ಕಿರುತ್ತದೆ ಎಂದು ದಾವೆ ಸಲ್ಲಿಸಿರುತ್ತೇನೆ. ನನ್ನ ತಾಯಿ ಹೆಸರು ಶಿವಮ್ಮ. ತಂದೆ ಹೆಸರು ವೀರಪ್ಪ. ವಾದಪತ್ರದಲ್ಲಿ ನನ್ನ ತಂದೆ ಹೆಸರು ಶಿವಪ್ಪ ಎಂದರೆ ಸರಿಯಲ್ಲ ಅವರು ನನ್ನ ಸೋದರ ಮಾವ. ವಾದಪತ್ರದಲ್ಲಿ ಹೇಳಿರುವ ಹಾಗೆ ಶಿವಪ್ಪನ ಮಗಳು ದೇವಮ್ಮ ನಾನಲ್ಲ. ಪ್ರಮಾಣಪತ್ರವನ್ನು ನಾನೆ ಹೇಳಿ ಬರೆಸಿರುತ್ತೇನೆ. ಈ ದಾವೆಯನ್ನು ಶಿವಪ್ಪನ ಮಗಳು ದೇವಮ್ಮ ಸಲ್ಲಿಸಿರುತ್ತಾರೆ ನಾನು ಪಕ್ಷಗಾರಳಲ್ಲ ಎಂದರೆ ಸಾಕ್ಷಿಯು ನಾನು ವೀರಪ್ಪ ಮತ್ತು ಶಿವಮ್ಮ ಮಗಳು ಎಂದು ಹೇಳುತ್ತಾರೆ. ನನ್ನ ಪತಿ ಹೆಸರು ಶಿವಪ್ಪ. ಈ ದಾವೆಯಲ್ಲಿ ನನಗೆ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ . ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಿರುತ್ತದೆ. ವಾದಪತ್ರದಲ್ಲಿ ತಪ್ಪನ್ನು ಬರೆದಿರುತ್ತಾರೆ ಆ ವಿಚಾರ ನನಗೆ ಗೊತ್ತಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.